ಶ್ರೀ ಎಂ.ಪಿ. ಪ್ರಕಾಶ್ : ನ್ಯಾಯಾಲಯದಲ್ಲಿ ಯಾವ ಕಾರಣದಿಂದ ತೀರ್ಪು ಆಗಿದೆ, ಸರಿಯಾದಂಥ ಮಾಹಿತಿ ಅಥವಾ, ಎವಿಡೆನ್ಸ್ ಇಲ್ಲದೇ ಇರತಕ್ಕಂಥ ಕಾರಣ ಇರಬಹುದು, ಅಥವಾ ಗುಣಾವುಗುಣಗಳ ಬಗ್ಗೆ ಪರಾಮರ್ಶಿಸಿ ತೀರ್ಪನ್ನು ಕೊಟ್ಟಿರಬಹುದು, ನಾವು ಖಂಡಿತವಾಗಿ ಈ ಗಂಭೀರವಾದ ವಿಷಯದ ಹಿನ್ನೆಲೆಯಲ್ಲಿ ನಾನು ಕಾನೂನು ಸಚಿವರ ಗಮನಕ್ಕೆ ಅದನ್ನು ತಂದು ಅಡ್ವೊಕೇಟ್ ಜನರಲ್ ಕಡೆಯಿಂದ ಪರಿಶೀಲಿಸಿ ಅದನ್ನು ಮೇಲ್ಮನವಿ ಮಾಡುವುದಕ್ಕೆ ಏನೇನು ಸಾಧ್ಯತ ಇದೆ ಅದನ್ನು ಪರೀಕ್ಷೆ ಮಾಡಿ ನಿರ್ಧಾರವನ್ನು ಸರ್ಕಾರ ಖಂಡಿತ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೋಗಲೇಬೇಕು. ಏಕೆಂದರೆ ಮಾನ್ಯ ಅಧ್ಯಕ್ಷರೇ, ಇವರು ಹೀಗೆ ಬಿಟ್ಟರೆ ಆಗುವುದಿಲ್ಲ. ಏಕೆಂದರೆ ಗೊತ್ತಿದ್ದು ಬಿಡುವುದು ಸರಿಯಲ್ಲ. ಏಕೆಂದರೆ ಅಲ್ಲಿ ಆರ್ಕಿಟೆಕ್ಟ್ ಇದ್ದಾರೆ, ಇಂಜಿನಿಯರ್ಸ್ ಇದ್ದಾರೆ, ಕೆಲವು ಸಲ ಕೆಳಗಿನ ಕೋರ್ಟ್‌ನಲ್ಲಿ ಅನೇಕ ಲೋಪದೋಷಗಳು ಆಗುತ್ತಿರುತ್ತವೆ. ಹೀಗಿಲ್ಲದಿದ್ದರೆ ಅಪೀಲೇ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಇರುತ್ತಿರಲಿಲ್ಲ. ಯಾವಾಗ ನಮಗೆ ಲಿವೆನ್ಯೂಸ್ ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇದೆ ಈ ಎಲ್ಲಾ ಆಪರ್ಚ್ಯುನಿಟೀಸ್ ಕಳೆದ ಮೇಲೆ ಬೇಕಾದರೆ ಇನ್ನು ಮುಂದೆ ಹೋಗುವುದು ಬೇಡ, ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಾಗಿದೆ, ಸಾಕು, ಇನ್ನು ಮುಂದೆ ಹೋಗುವುದು ಬೇಡವೆಂದರೆ ಅದಕ್ಕೆ ಒಪ್ಪಬಹುದು. ಆದರೆ ಕೆಲವು ಸಲ ತಪ್ಪು ನಿರ್ಣಯಗಳನ್ನು ಕೋರ್ಟ್‌ನಲ್ಲಿ ಹಾಕುತ್ತಾರೆ, ಆ ರೀತಿ ಆಗುವುದಿಲ್ಲವೆಂದೇನೂ ಇಲ್ಲ. ಅದಕ್ಕಾಗಿ ಇದು ಯಾವುದೇ ಸ್ಥಿತಿಯಲ್ಲಿ ಹೋಗತಕ್ಕಂಥ ಕೇಸ್ ಇದೆಯಾದ್ದರಿಂದ ದಯವಿಟ್ಟು ತಾವು ತಮ್ಮಲಾ ಡಿಪಾರ್ಟ್‌ಮೆಂಟಿನವರು ಅಡ್ವೊಕೇಟ್ ಜನರಲ್‌ರವರಿಗೆ ಹೇಳಿ ಅಪೀಲ್ ಹಾಕಬೇಕೆಂದು ಒತ್ತಾಯ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ವಿಷಯದ ಗಂಭೀರತೆ ಇಡೀ ಸದನಕ್ಕೆ ಗೊತ್ತಿರುವಂಥದ್ದು. ಆದುದರಿಂದ Nobody, specially the Courts are not infallible. ಅದು ಇದ್ದೇ ಇರುತ್ತದೆ. ಆದರೆ ತೀರ್ಮಾನ ಬಂದಿರತಕ್ಕಂಥದ್ದು `not on sufficient evidence' ಅಥವಾ ಮೆರಿಟ್‌ನ ಮೇಲೆ ನಿರ್ಣಯ ಮಾಡಿದ್ದಾರೋ ಎಂಬ ಬಗ್ಗೆ ಸ್ವಲ್ಪ ಎಗ್ಸಾಮಿನ್ ಮಾಡಬೇಕಾಗುತ್ತದೆ. ಅದನ್ನು ನಾವು ಪರೀಕ್ಷೆ ಮಾಡುತ್ತೇವೆ. ಖಂಡಿತವಾಗಿ ತಮ್ಮ ಮನಸ್ಸಿನ ಪ್ರಕಾರ ಮೇಲ್ಮನವಿ ಮಾಡಿಕೊಳ್ಳುವುದಕ್ಕೆ ಏನೇನು ಸಾಧ್ಯತೆಗಳಿವೆಯೋ ಅವೆಲ್ಲವನ್ನು ನಾವು ಮಾಡುತ್ತೇವೆ.

(೫) ಹೊಸನಗರ ಮತ್ತು ತೀರ್ಥಹಳ್ಳಿಗಳಿಗೆ ವಿದ್ಯುತ್ ಸಂಪರ್ಕದ ಕಾರ್ಯಗಳು ಪೂರ್ಣವಾಗಿಲ್ಲದಿರುವುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ 2 ವರ್ಷಗಳ ಹಿಂದೆ ತೀರ್ಥಹಳ್ಳಿ ಕ್ಷೇತ್ರದ 232 ಹಳ್ಳಿಗಳಿಗೆ ಮತ್ತು ಹೊಸನಗರ ತಾಲ್ಲೂಕಿನ 100 ಹಳ್ಳಿಗಳಿಗೆ ಅಂದರೆ ಮಜರೆ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿಕೊಡಲು ಸಾಲದ ರೂಪದಲ್ಲಿ ಹೊಸನಗರಕ್ಕೆ ಒಂದು ಕೋಟಿ ರೂ.ಗಳನ್ನು ಮತ್ತು ತೀರ್ಥಹಳ್ಳಿಗೆ ಒಂದು ಕೋಟಿ 97 ಲಕ್ಷ ರೂ.ಗಳನ್ನು 2 ವರ್ಷದ

ಪ್ರಾಜೆಕ್ಟ್‌ಗಾಗಿ ಹಣವನ್ನು ಮಂಜೂರು ಮಾಡಲಾಗಿದೆ. ಈ ಎರಡು ವರ್ಷದಲ್ಲಿ ಕೆಲಸ ಸಂಪೂರ್ಣವಾಗಿ ಮುಗಿಯಬೇಕಾಗಿತ್ತು. ಏಕೆಂದರೆ ರಾಜ್ಯ ಸರ್ಕಾರವೇ ಎರಡು ವರ್ಷಗಳಲ್ಲಿ ಕೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತೇನೆಂದು ಒಪ್ಪಿಕೊಂಡಿತ್ತು. ಆದರೆ ಕೆಲಸ ಸಂಪೂರ್ಣವಾಗಿ ಇನ್ನೂ ಮುಗಿದಿಲ್ಲ. ನನ್ನ ತಾಲ್ಲೂಕಿನಲ್ಲಿ 232 ಹಳ್ಳಿಗಳಿಗೆ ಬದಲಾಗಿ ಕೇವಲ 15 ಹಳ್ಳಿಗಳಿಗೆ ಮತ್ತು ಹೊಸನಗರ ತಾಲ್ಲೂಕಿನ 100 ಹಳ್ಳಿಗಳಿಗೆ ಬದಲಾಗಿ ಕೇವಲ 10 ಹಳ್ಳಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕವನ್ನು ಕೊಟ್ಟಿದ್ದಾರೆ. ನಮ್ಮದು ಮಲೆನಾಡು ತಾಲ್ಲೂಕಾಗಿದ್ದು ವರಾಹಿ ಮತ್ತು ಶರಾವತಿ ಜಲ ವಿದ್ಯುತ್ ಯೋಜನೆಗಳನ್ನು ರಾಜ್ಯಕ್ಕೆ ಕೊಟ್ಟಿವೆ. ಮುಳುಗಡೆಯಾಗಿ ಆಳಿದುಳಿದಿರತಕ್ಕಂಥ ಈ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವಿಲ್ಲವಾಗಿದೆ. ಇಂಥ ಒಂದು ತಾಲ್ಲೂಕಿಗೆ ಈ ರೀತಿಯ ನಷ್ಟವನ್ನು ಉಂಟು ಮಾಡಿದ್ದಾರೆ. ಮಾರ್ಚ್ 31 ರಂದು ಈ ಪ್ರಾಜೆಕ್ಟ್‌ಗಳು ವೈಂಡಪ್ ಆಗುತ್ತವೆ, ಕ್ಲೋಸ್ ಆಗುತ್ತವೆ. ಇದರಿಂದಾಗಿ ನಮ್ಮ ತೀರ್ಥಹಳ್ಳಿ ತಾಲ್ಲೂಕಿಗೆ 1.5 ಕೋಟಿ ರೂ.ಗಳ ಮತ್ತು ಹೊಸನಗರ ತಾಲ್ಲೂಕಿಗೆ 75 ಲಕ್ಷ ರೂ.ಗಳ ನಷ್ಟವಾಗುತ್ತದೆ. ಕಳೆದೆರಡು ವರ್ಷಗಳಿಂದ ಕೆಲಸ ಪೂರ್ಣ ಮಾಡದೇ ಈ ರೀತಿಯ ನಷ್ಟವುಂಟಾಗಲು ಕಾರಣಕರ್ತರಾದ ಅಧಿಕಾರಿಗಳಿಗೆ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರ ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಇದಲ್ಲದೇ ಈ ಪ್ರಾಜೆಕ್ಟ್‌ನ್ನು ಮುಂದುವರಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಆರ್.ಇ.ಸಿ. ಮುಖಾಂತರ ತೀರ್ಥಹಳ್ಳಿ ತಾಲ್ಲೂಕಿಗೆ ಸುಮಾರು 2.5 ಕೋಟಿ ರೂ.ಗಳ ವೆಚ್ಚದಲ್ಲಿ ಮತ್ತು ಹೊಸನಗರ ತಾಲ್ಲೂಕಿಗೆ ಸುಮಾರು 1.97 ಕೋಟಿ ರೂ.ಗಳ ವೆಚ್ಚದಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಇಲ್ಲಿಯವರೆವಿಗೆ ರಾಜ್ಯ ಸರ್ಕಾರ 40 ಲಕ್ಷ ರೂ.ಗಳನ್ನು ಖರ್ಚು ಮಾಡಿ ಕೆಲವೊಂದು ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಪೂರೈಕೆ ಮಾಡಿದೆ. ಆದರೆ ಮಾನ್ಯ ಸದಸ್ಯರ ಕಳವಳವೇನೆಂದರೆ 1997ರ ಮಾರ್ಚ್ ಒಳಗೆ ಈ ಕೆಲಸ ಪೂರ್ಣವಾಗದಿದ್ದರೆ ಪ್ರಾಜೆಕ್ಟ್ ಲ್ಯಾಪ್ಸ್ ಆಗುತ್ತದೆ ಎಂಬುದಾಗಿದೆ. ನಾವು ಈ ಸಂಬಂಧ ಕಾರ್ಯಪ್ರವೃತ್ತರಾಗಿದ್ದು ಪ್ರಾಜೆಕ್ಟ್‌ಗೆ ಕಾಲ ವಿಸ್ತರಣೆಗೋಸ್ಕರ ಪತ್ರವನ್ನು ಬರೆದಿದ್ದೇವೆ. ಅದಕ್ಕೆ ಕಾಲ ವಿಸ್ತರಣೆ ಸಿಗುತ್ತದೆ. ಆದುದರಿಂದ 1998ರ ಮಾರ್ಚ್ ಕೊನೆಯೊಳಗೆ ತೀರ್ಥಹಳ್ಳಿ ಕ್ಷೇತ್ರದ 232 ಹಳ್ಳಿಗಳಿಗೆ ಮತ್ತು ಹೊಸನಗರ ತಾಲ್ಲೂಕಿನ 87 ಹಳ್ಳಿಗಳಿಗೆ ವಿದ್ಯುತ ಸಂಪರ್ಕವನ್ನು ಕಲ್ಪಿಸಲಾಗುವುದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಈಗ ಮಾನ್ಯ ಮಂತ್ರಿಗಳೇ ಹೇಳಿದ ಹಾಗೆ ಕಳೆದೆರಡು ವರ್ಷಗಳಿಂದ 232 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಬೇಕಾಗಿರುವ ಕಡೆ ಕೇವಲ 15 ಹಳ್ಳಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕವನ್ನು ಒದಗಿಸಿದ್ದಾರೆಂದರೆ ಅಧಿಕಾರಿಗಳೇನು ಕೆಲಸ ಮಾಡುತ್ತಿದ್ದಾರೆಯೇ ಅಥವಾ ಸಂಬಳವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆಯೇ? ಅವರು ಇನ್ನು ಯಾವ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ನನ್ನನ್ನು ಕ್ಷಮಿಸಿ, ನಾನು ಇದರ ಬಗ್ಗೆ ಧರಣಿ ಸತ್ಯಾಗ್ರಹವನ್ನು ಮಾಡುತ್ತೇನೆ. ನನ್ನ ಕ್ಷೇತ್ರದ ಜನಗಳಿಗೆ ಬಹಳ ಅನ್ಯಾಯವಾಗಿದೆಯಾದ ಕಾರಣ

ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ. ಆದುದರಿಂದ ನಾನು ಧರಣಿ ಸತ್ಯಾಗ್ರಹವನ್ನು ಮಾಡಲೇಬೇಕಾಗಿದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಅಧಿಕಾರಿಗಳಿಂದ ಈ ಒಂದು ಕೆಲಸಕ್ಕೆ ತೊಂದರೆಯಾಗಿದ್ದ ಪಕ್ಷದಲ್ಲಿ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ಯಾವ ಮುಲಾಜಿಲ್ಲ.

(ಗೊಂದಲ)

ಅಧ್ಯಕ್ಷರು : ಜ್ಞಾನೇಂದ್ರರವರೆ, ನಿಮ್ಮ ಒಂದು ಮುಖ್ಯವಾದ ಸಮಸ್ಯೆಗೆ ಮಂತ್ರಿಗಳು ಈಗಾಗಲೇ ಉತ್ತರಿಸಿ ಈ ಯೋಜನೆಯನ್ನು ಈ ವರ್ಷಕ್ಕೇ ಮುಕ್ತಾಯಗೊಳಿಸದೆ ಮುಂದುವರಿಸುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದು ಬಹಳ ಮುಖ್ಯವಾಗಿ ನಿಮಗೆ ಅಲ್ಲಿಯ ಅಭಿವೃದ್ಧಿ ದೃಷ್ಟಿಯಿಂದ ಇದು ಆಗತಕ್ಕಂಥದ್ದಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಅಧ್ಯಕ್ಷರೇ, ಅದು ಇವರ ಕೈಯಲಿಲ್ಲ, ಕೇಂದ್ರ ಸರ್ಕಾರದವರು ಮಾಡಿರುವ ಯೋಜನೆ.

ಅಧ್ಯಕ್ಷರು : ಇಲ್ಲ, ನನ್ನ ಕ್ಷೇತ್ರದಲ್ಲಿ ಮಾಡಿಸಿದ್ದೇನೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಈ ರೀತಿಯ ಕೆಲಸ ಅಪೂರ್ಣವಾಗಿರುವುದರಿಂದ ಈ ಕೆಲಸಕ್ಕೆ ಇನ್ನೂ ಒಂದು ವರ್ಷಗಳ ಕಾಲದ ವಿಸ್ತರಣೆಯನ್ನು ಕೊಡಬೇಕೆಂದು ಕೇಳಿದರೆ ಅವರು ವಿಸ್ತರಣೆಯನ್ನು ಮಾಡುತ್ತಾರೆ. ಅದೇನೂ ದೊಡ್ಡ ಸಮಸ್ಯೆಯಲ್ಲ. ಅದಕ್ಕೆ ತಕ್ಕ ಹಾಗೆ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇನ್ನು ಎರಡನೆಯದಾಗಿ ಅಲ್ಲಿ ಕೆಲಸಗಳು ಬಹಳ ಮಂದಗತಿಯಲ್ಲಿ ನಡೆಯುತ್ತಿದೆಯೆಂದು ಹೇಳಿದ್ದೀರಿ. ಅದಕ್ಕೆ ನಾನು ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈ ಬಗ್ಗೆ ವಿಚಾರಣೆ ನಡೆಸಿ ಯಾರು ಈ ಕೆಲಸ ವಿಳಂಬವಾಗುವುದಕ್ಕೆ ಕಾರಣರಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಅಧ್ಯಕ್ಷರೇ, ಇದು ನಮ್ಮ ತಾಲ್ಲೂಕಿನಲ್ಲಿಯೂ ಇದೆ. ಅಲ್ಲಿಯ ಅಧಿಕಾರಿಗಳು ಏನು ಬಾಯಿ ಹೊಡೆದುಕೊಳ್ಳುತ್ತಾರೆಂದರೆ ಮೆಟೀರಿಯಲ್ಸ್ ಇಲ್ಲವಾದ ಕಾರಣ ನಾವೇನು ಮಾಡುವುದು ಎಂದು ಹೇಳುತ್ತಾರೆ. ಈ ಬಗ್ಗೆ ಉತ್ತರ ಕೊಡಿ ಎಂದರೆ ಸರ್ಕಾರದವರು ಅದನ್ನು ಹೇಳುವುದೇ ಇಲ್ಲ. ಅಧಿಕಾರಿಗಳಿಗಿಂತ ಹೆಚ್ಚಾಗಿ ಅಲ್ಲಿ ಮೆಟೀರಿಯಲ್ ಸಿಕ್ಕದೇ ಇರುವ ಕಾರಣಕ್ಕಾಗಿ ಅವರು ಕೆಲಸ ಮಾಡಲು ಆಗುತ್ತಿಲ್ಲ. ಈ ವಿಷಯವನ್ನು ಅವರು ಹೇಳಬೇಕು. ಈ ಕೆಲಸಗಳು ವಿಳಂಭವಾಗುತ್ತಿರುವುದಕ್ಕೆ ಏನು ಕಾರಣ? ಇದಕ್ಕೆ ಮೊದಲು ಉತ್ತರ ಹೇಳಿ. Is is not a fact? Have you supplied the materials? Why there is a delay? Please reply for this.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈ ಸ್ಕೀಮ್ಸ್‌ಗಳು ಬರುತ್ತವೆ. ಮೊದಲನೆಯದಾಗಿ ಇವರು ಹಣವನ್ನು ಮಿಸ್ ಅಪ್ಲೀಕೇಷನ್ ಆಫ್ ಫಂಡ್ಸ್, ಮಾಡುತ್ತಾರೆ ಅಂದರೆ ಬೇರೆ ಕಡೆಗೆ ಬಳಸಿಕೊಳ್ಳುತ್ತಾರೆ. ಎರಡನೆಯದಾಗಿ, ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ

ಮೆಟೀರಿಯಲ್ ಸಪ್ಲೈ ಇಲ್ಲ. ಇದರ ಬಗ್ಗೆ ಇವರು ಮೊದಲೇ ಪ್ಲಾನ್ ಮಾಡಬೇಕಾದರೆ ಇವೆಲ್ಲವನ್ನೂ ನೋಡಿಕೊಂಡು ಮಾಡಬೇಕು. ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡರೆ ನಾವೆಷ್ಟು ಹಿಂದೆ ಬಿದ್ದಿದ್ದೇವೆ ಈ ವಿಚಾರದಲ್ಲಿ ಎಂದರೆ ಬಹಳ ಅಜಗಜಾಂತರ. ಕೇವಲ ಅಧಿಕಾರಿಗಳ ಮೇಲೆ ದೂರು ಹೇಳಿದರೆ ಆಗುವುದಿಲ್ಲ. ಅದಕ್ಕೆ ಹಣಕಾಸನ್ನು ನೀವು ಒದಗಿಸಬೇಕಾಗುತ್ತದೆ. ಇದಲ್ಲದೇ ಮೆಟೀರಿಯಲ್ಸ್‌ನ್ನು ಸಪ್ಲೈ ಮಾಡಬೇಕಾಗುತ್ತದೆ. ಈ ಸ್ಕೀಮ್ಸ್‌ನಲ್ಲಿ ಬಂದ ಹಣವನ್ನು ಖರ್ಚು ಮಾಡಬೇಕು. ಬಂದ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗೇನು ಕಷ್ಟವಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ್ : ಕೇಂದ್ರ ಸರ್ಕಾರಕ್ಕೆ ಬರೆದ ಮೇಲೆ ಹಣ ಏನು ಬರುತ್ತದೆ ಅದನ್ನು ಖರ್ಚು ಮಾಡುತ್ತೇವೆ. ನಾವು ಕೊಟ್ಟಂಥ ಹಣವನ್ನು ದುರುಪಯೋಗ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ನನ್ನ ತಾಲ್ಲೂಕಿನಲ್ಲಿ ಎಷ್ಟು ಮೆಟೀರಿಯಲ್ಸ್ ಬೇಕು ಎಂದು ಬೋರ್ಡ್‌ಗಳಿಗೆ ಬರೆದಿದ್ದಾರೆ The list of material, required for electrification of the remaining 193 hamlets and 15 HVs in Sagar Taluk. Are you prepared to supply these materials? This is the letter written to the Board. ಅವರದ್ದೂ ಕೂಡ ಅದೇ ಸಮಸ್ಯೆ ಇದೆ. ಇದಕ್ಕೆ ಬೇಕಾದರೆ ಚೀಫ್ ಇಂಜನಿಯರ್ ಹತ್ತಿರ ರೆಕಾರ್ಡ್ ತೆಗೆಸಿ ನೋಡಿ.

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹೇಳತಕ್ಕಂಥದ್ದು ವಾಸ್ತವಾಂಶ. ಕೆ.ಇ.ಬಿ.ಗೆ ಬೇಕಾಗಿರತಕ್ಕಂಥ ಅನೇಕ ಐಟಮ್ಸ್‌ಗಳು ಅಲ್ಲಿಗೆ ಸಪ್ಲೈ ಆಗುತ್ತಿಲ್ಲ. ಆ ಕಾರಣದಿಂದ ಕೆಲಸ ನಿಧಾನ ಆಗುತ್ತದೆ. ಹೊಸದಾಗಿ ಬಂದಿರತಕ್ಕಂಥ ಅರಗ ಜ್ಞಾನೇಂದ್ರರವರ ಆತಂಕವೆಂದರೆ ಅವರ ಕ್ಷೇತ್ರದಲ್ಲಿ ಕೆಲಸ ಇನ್ನೂ ಆಗಿಲ್ಲವಲ್ಲಾ ಎನ್ನುವುದು. ಆದರೆ ಅದರ ಬಗ್ಗೆ ಅವರು ಭಯ ಪಡಬೇಕಾಗಿಲ್ಲ. ಈ ಕಾರಣದಿಂದ ಆರ್.ಇ.ಸಿ. ಸ್ಕೀಮ್ ಕ್ಲೋಸ್ ಆಗುವುದಿಲ್ಲ. ಅದನ್ನು ಮುಂದುವರಿಸುವುದಕ್ಕೆ ಮಂತ್ರಿಗಳು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಇನ್ನು ಮೆಟೀರಿಯಲ್ಸ್ ಶಾರ್ಟೇಜ್ ಇರುವ ಬಗ್ಗೆ ಇರತಕ್ಕಂಥ ಸಮಸ್ಯೆ ಇಡೀ ರಾಜ್ಯದಲ್ಲಿ ಇರತಕ್ಕಂಥದ್ದು. ಅದನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ದೊಡ್ಡ ರಾಮಾಯಣವೇ ಆಗುತ್ತದೆ. ಸಾಧ್ಯವಾದಷ್ಟು ಬೇಗ ಮೆಟೀರಿಯಲ್ಸ್ ಸಪ್ಲೈ ಮಾಡಿಸಿ ಕೆಲಸ ಮಾಡಿಸಿಕೊಡುವ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ. ಅರಗ ಜ್ಞಾನೇಂದ್ರರವರು ದಯವಿಟ್ಟು ನನ್ನ ಮೇಲೆ ವಿಶ್ವಾಸವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಂತ್ರಿಗಳೇ, ನಾನು ನಿಮಗೆ ಇದೇ ವಿಚಾರದ ಬಗ್ಗೆ ಪತ್ರವನ್ನು ಬರೆದಿದ್ದೇನೆ ನೋಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಂತ್ರಿಗಳು ಸಂಬಂಧಪಟ್ಟ ಎಲ್ಲಾ ವಿಚಾರವನ್ನು ಹೇಳಿದ್ದಾರೆ. ಮೆಟೀರಿಯಲ್ಸ್ ಕೆ.ಇ.ಬಿ.ಯಲ್ಲಿ ಶಾರ್ಟೇಜ್

ಇರುವುದು ಕೇವಲ ಈ ಹಿಂದಿನ 12 ತಿಂಗಳಿನಿಂದ ಮಾತ್ರವಲ್ಲ. ಓವರ ದಿ ಈಯರ್ಸ್ ಕೆ.ಇ.ಬಿ ಯಾವ ರೀತಿ ಹೇಗೆ ಕೆಲಸ ಮಾಡಿದೆ ಎಂಬ ಬಗ್ಗೆ ಈ ಕಡೆ ಕುಳಿತಿರುವವರು ಮತ್ತು ಈ ಕಡೆ ಕುಳಿತಿರುವವರೆಲ್ಲರೂ ಜವಾಬ್ದಾರರಾಗಿದ್ದೇವೆ. What is the performance of the KEB today? ಕೆ.ಇ.ಬಿ. ಇನ್-ಎಫಿಷಿಯೆನ್ಸಿ ವಿಚಾರದಲ್ಲಿ ಇಂಜಿನಿಯರ್ಸ್‌ಗಳು ಏಕೆ ಕೆಲಸ ಮಾಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. The Government has taken the responsibility.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮೆಟೀರಿಯಲ್ಸ್ ಇಲ್ಲ ಎಂದರೆ 'ಇಲ್ಲ' ಎಂದು ಹೇಳಿ. ಹಣಕಾಸಿನ ತೊಂದರೆ ಇದೆ, ಸಪ್ಲೈ ಆಗಲಿಲ್ಲ ಎಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಬೆಲ್ಲದ್‌ರವರು ಮೊದಲಿನಿಂದಲೂ ಜನತಾ ದಳದ ಪಾರ್ಟಿಯಲ್ಲಿ ಇರಲಿಲ್ಲ. ಕಾಂಗ್ರೆಸನಲ್ಲೂ ಇರಲಿಲ್ಲ. ನೀವು ಭಾರತೀಯ ಜನತಾ ಪಾರ್ಟಿಯಲ್ಲಿ ಇದ್ದವರು. ಆದುದರಿಂದ ನಿಮ್ಮ ಬಿಡಿ. ಕಾಂಗ್ರೆಸ್‌ನವರು ಮತ್ತು ಜನತಾ ದಳದವರು, ನಾವು ನೀವು ಜವಾಬ್ದಾರಿ ಇದ್ದೇವೆ. ಅದರಲ್ಲಿ ಏನೂ ಸಂಶಯ ಇಲ್ಲ. Over the years the KEB has been functioning like that. The Hon'ble Minister has very categorially stated that there is shortage. He has also admitted that for REC schemes, we have written to the Government of India to start the programmes and also continue and see that we will do our best. This is the assurance the Government will give to the Hon. Member.

ಶ್ರೀ ಕಾಗೋಡು ತಿಮ್ಮಪ್ಪ : ಸರ್ಕಾರಕ್ಕೆ ತೊಂದರೆಗಳು ಬರುತ್ತದೆ, ಇಲ್ಲ ಎಂದು ನಾವು ಹೇಳುವುದಿಲ್ಲ. ಡಿಲೇ ಆಗುವುದಕ್ಕೆ ಕಾರಣಗಳು ಏನು ಎಂದು ಹೇಳಿಬಿಟ್ಟರೆ ನಾವು ಪದೇ ಪದೇ ಕೇಳುವ ಪ್ರಶ್ನೆ ಬರುವುದಿಲ್ಲ. ಮೆಟರೀಯಲ್ ಪ್ರಕ್ಯೂರ್‌ಮೆಂಟ್ ಆಗಲಿಲ್ಲ, ಆದ್ದರಿಂದ ಡಿಲೇ ಆಯಿತು. ಸಾಧ್ಯವಾದಷ್ಟು ಇದನ್ನು ಕಂಪ್ಲೀಟ್ ಮಾಡುತ್ತೇವೆಂದರೆ ನಾನು ಒಪ್ಪುತ್ತೇನೆ. ಬೇರೆ ಹೇಳಿದರೆ ಏನು ಮಾಡುವುದು? ಅದಕ್ಕೆ ನಾವು ರೈಸ್ ಮಾಡುತ್ತಿರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಾ ಸಾಹೇಬರು ಬೆಂಗಳೂರಿನಿಂದ 40 ಕಿಲೋಮೀಟರ್ ದೂರದಲ್ಲಿ ಇದ್ದಾರೆ. ಕಾಗೋಡು ತಿಮ್ಮಪ್ಪನವರು 330 ಕಿಲೋಮೀಟರ್ ದೂರ ಇದ್ದಾರೆ. ನಾನು 800 ಕಿಲೋಮೀಟರ್ ದೂರ ಇರುವವನು, ನನ್ನ ಗತಿ ಏನು? ನಮಗೆ ಮೆಟರಿಯಲ್ ಮುಟ್ಟುವುದೇ ಇಲ್ಲ. ಬೆಂಗಳೂರು ಸುತ್ತಮುತ್ತ ಇದ್ದವರು ಮೊದಲು ಲಾರಿ ತಂದು...

ಶ್ರೀ ಕಾಗೋಡು ತಿಮ್ಮಪ್ಪ : ಪೂರ್ತಿಯಾಗಿ ಕೋಲಾರ, ತುಮಕೂರು, ಮಂಡ್ಯ ಇಲ್ಲಿ ಎಲ್ಲಾ ಮೆಟರೀಯಲ್ಸ್ ಸಿಗುತ್ತದೆ. ಏಕೆಂದರೆ ಇಲ್ಲಿ ಹೆಚ್ಚಾಗಿ ಎಲ್ಲಾ ಎಕ್ಸಿಕ್ಯೂಟಿವ್ ಎಂಜಿನಿಯರ್, ಚೀಫ್ ಎಂಜಿನಿಯರ್ ಈ ರೀಜನ್‌ನಿಂದಲೇ ಬರುವವರು.

ಅಧ್ಯಕ್ಷರು : ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವು ಏನಾದರೂ ಹೇಳಬೇಕಾಗಿದ್ದರೆ ನೇರವಾಗಿ ಬೈರೇಗೌಡರಿಗೆ ಹೇಳಬಹುದಲ್ಲಾ, ನನಗೆ ಏಕೆ ಹೇಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪ್ಪಿನವರು ಆಳುತ್ತಿದ್ದಾರೆ ಎಂದರೆ ತೆಂಗಿನವರು ಏಕೆ ಆಳಬೇಕು ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಕೋಲಾರ ಮತ್ತು ಬೆಂಗಳೂರು ಸುತ್ತಮುತ್ತಲೂ ಎಂದು ಏನು ಹೇಳುತ್ತಿದ್ದಾರೆ, ಮೊದಲು ನೀವು ಬಂದು ನೋಡಿ ಕೋಲಾರ ಜಿಲ್ಲೆಯಲ್ಲಿ ಏನಾಗಿದೆ ಎಂದು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮಲ್ಲಿ ಇರತಕ್ಕಂಥ ಸಬ್‌ಸ್ಟೇಷನ್ ನಮ್ಮಲ್ಲಿ ಆಗಿದ್ದಾಪೆಯೇ ತೋರಿಸಿಬಿಡಿ. ಒಂದೂ ಆಗುವುದಿಲ್ಲ. ಹತ್ತಿರ ಇದೆ ಎಂದು ಹೇಳಿ ಇವರು ಬೇಗನೆ ಗಲಾಟೆ ಮಾಡಿ...

ಅಧ್ಯಕ್ಷರು : ನಿಮ್ಮಲ್ಲಿ ಜನರೇಟಿಂಗ್ ಸ್ಟೇಷನ್ ಇದೆ. ಸಬ್‌ಸ್ಟೇಷನ್ ಬೇಕಾಗಿಲ್ಲ.

ಶ್ರೀ ಸಿ. ಬೈರೇಗೌಡ : ನಾವು 600 ಅಡಿ ಕೆಳಗಡೆಯಿಂದ ಕುಡಿಯುವುದಕ್ಕೆ ನೀರು ತರುತ್ತಿದ್ದೇವೆ. ಇವರಿಗೆ ನೀರು ಯಥೇಚ್ಛವಾಗಿ ಹರಿದು ಸಮುದ್ರ ಸೇರುತ್ತಿದೆ. ಕೃಷ್ಣಾ ನದಿ, ಮಹಾರಾಷ್ಟ್ರ ಪ್ರಾರಂಭವಾಗಿ ಆಂಧ್ರ ಮತ್ತು ಕರ್ನಾಟಕ ಎಲ್ಲಾ ಕಡೆ ಹರಿಯುತ್ತಿದೆ. ಏನೂ ಇಲ್ಲದೆ ಇರುವಂತಹವರು ನಾವು. ನಮ್ಮನ್ನು ನೋಡಿ ಇಷ್ಟು ವ್ಯಥೆ ಪಡುತ್ತೀರಿ. ಸಂತೋಷ ಪಡುವುದು ಬಿಟ್ಟು.

ಶ್ರೀ ಕಾಗೋಡು ತಿಮ್ಮಪ್ಪ : ಇವರು ಮಳೆಗಾಲದಲ್ಲಿ ಬಂದಿದ್ದರು. ನಮ್ಮಲ್ಲಿ ಪಂಪ್‌ಸೆಟ್ ಹಾಕಿರಲಿಲ್ಲ. ಇವರು ಬಂದು ನೋಡಿ ನೀವು ಪಂಪ್‌ಸೆಟ್ ಹಾಕಿಕೊಂಡಿಲ್ಲ. ಎಷ್ಟೊಂದು ನೀರಿದೆ ಎಂದು ಹೇಳಿದ ಮೇಲೆ ನಾವು ಪಂಪ್‌ಸೆಟ್ ಹಾಕಿದವು. ಈಚೆಗೆ ಅರಣ್ಯ ಹೋದ ಮೇಲೆ ಬಹಳಷ್ಟು ಮಳೆ ಕಡಿಮೆಯಾಗಿದೆ. ಈಗ ನಾವು ಪಂಪ್‌ಸೆಟ್‌ನ್ನು ಅನಿವಾರ್ಯವಾಗಿ ಹಾಕುವಂತಹ ಪರಿಸ್ಥಿತಿ ಬಂದಿದೆ. ಆಗ ತೊಂದರೆ ಇರಲಿಲ್ಲ. ಅದಕ್ಕೆ ನಾವು ಗಲಾಟೆ ಮಾಡಲಿಲ್ಲ. ಆಗ ನಮಗೆ ಹೆಚ್ಚು ಕೊಡಲಿಲ್ಲ. ನೀವು ಗಲಾಟೆ ಮಾಡಿ ಎಲ್ಲಾ ಹೆಚ್ಚು ತೆಗೆದುಕೊಂಡಿರಿ.

ಶ್ರೀ ಸಿ. ಬೈರೇಗೌಡ : ಸಾಗರ್ ತಾಲ್ಲೂಕಿನಲ್ಲಿ ಪಂಪ್‌ಸೆಟ್ ಹಾಕಿ ಎಂದು ನಾವು ಹೇಳಿದ್ದೆವು. ಅಲ್ಲಿವರೆಗೂ ಪಂಪ್‌ಸೆಟ್ ಹಾಕಿಕೊಂಡಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಬಂದಿರಿ ಮಳೆ ಕಡಿಮೆಯಾಯಿತು. ಪಂಪ್‌ಸೆಟ್ ಹಾಕಬೇಕಾಯಿತು. ನೀವು ಹೋಗದೇ ಇದ್ದಿದ್ದರೆ ಮಳೆ ಬರುತ್ತಿತ್ತು, ಚೆನ್ನಾಗಿ ಇರುತ್ತಿತ್ತು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಹಣ ಇಲ್ಲ ಎಂದು ಹೇಳಿದಿರಿ, ಅದನ್ನು ಸೃಷ್ಟಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಇರುವ ಹಣವನ್ನೇ ಬಳಸಿಲ್ಲ ಎನ್ನುವುದು ಒಂದು ವಿಚಾರ. ಇನ್ನೊಂದು ಮೆಟರೀಯಲ್ಸ್ ಬಗ್ಗೆ ಮಾನ್ಯ ಸಿಂಧ್ಯಾರವರು ಹೇಳಿದರು.

ಅಧ್ಯಕ್ಷರು : ಇರುವ ಹಣವನ್ನು ಬಳಸದೆ ಇರುವುದಕ್ಕೆ ಕಾರಣ ಮೆಟೀರಿಯಲ್ ಲಭ್ಯವಿಲ್ಲದೇ ಇರುವುದು. ನೀವು ಬಹಳ ಚೆನ್ನಾಗಿ ಹೇಳಿದಿರಿ.

ಶ್ರೀ ಅರಗ ಜ್ಞಾನೇಂದ್ರ : ಅದರ ಬಗ್ಗೆ ನನ್ನ ತಕರಾರು ಇಲ್ಲ. ಮೆಟೀರಿಯಲ್ಸ್ ಇಲ್ಲವೇ ಎಂದರೆ ಸರಿ. ಆದರೆ ಇಲ್ಲೀಗಲ್ ಕನೆಕ್ಷನ್‌ಗೆ ನಿಮ್ಮ ಅಧಿಕಾರಿಗಳೆಲ್ಲಾ ಕೊಡುತ್ತಿದ್ದಾರೆ. ನಾವು ಕೇಳಿದರೆ ವೈರ್ ಇಲ್ಲ, ಕಂಬ ಇಲ್ಲ ಎಂದು ಹೇಳುತ್ತಾರೆ. ಇಂತಿಂಥ ಪ್ರಾಜೆಕ್ಟ್‌ಗಳಿಗೆ ಕೋಟಿಗಟ್ಟಲೆ ಹಣವನ್ನು ಲ್ಯಾಪ್ಸ್ ಮಾಡುತ್ತಾರೆ ಎನ್ನುವುದಾದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಚರ್ಚೆ ಬೇಡ. He will take action

ಅರಕಲಗೂಡಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಕ್ರಮವಾಗಿ ಸಿಮೆಂಟ್ ದುರುಪಯೋಗ ಮಾಡಿರುವುದು.

ಶ್ರೀ ಎಂ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 19ನೇ ತಾರೀಖು ನಮ್ಮ ಅರಕಲಗೂಡಿನಲ್ಲಿ ಇರತಕ್ಕಂಥ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಒಂದು ಉಪವಿಭಾಗಕ್ಕೆ ಸೇರಿದಂತಹ ಸಿಮೆಂಟ್‌ನ್ನು ಅಕ್ರಮವಾಗಿ ಅದೇ ಇಲಾಖೆಗೆ ಸೇರಿದಂತಹ ಲಾರಿ ಸಿ.ಎ.ಜಿ. 5917ರಲ್ಲಿ ತುಂಬಿಕೊಂಡು ಹಾಸನದ ಅವರ ಮನೆಗೆ ಸಾಗಿಸುತ್ತಿದ್ದಾಗ, ಸಾರ್ವಜನಿಕರು ಅದನ್ನು ಗುರುತು ಮಾಡಿ ಅದನ್ನು ಜಿಲ್ಲಾ ಪಂಚಾಯತ್ ಅಧಿಕಾರಿಗಳು ಕೂಡ ಹೋಗಿ ಅದನ್ನು ಕಣ್ಣಾರೆ ನೋಡಿದ್ದಾರೆ. ಹಾಸನ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ಆಡಳಿತ ನಡೆಯುತ್ತಿದೆ ಎನ್ನುವುದಕ್ಕೆ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಅದಕ್ಕೋಸ್ಕರ ಇಲ್ಲಿಂದ ಸ್ಪಷ್ಟವಾಗಿ ಮೆಸೇಜ್ ಹೋಗಬೇಕು. ಇಲ್ಲಿ ಏನು ಅಕ್ರಮವಾಗಿ ಸಾಗಿಸುತ್ತಿದ್ದು, ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ದುರುಪಯೋಗ ಎಂದರೆ ಸಿಮೆಂಟನ್ನು ಎಲ್ಲಾದರೂ ಮಣ್ಣಿನಲ್ಲಿ ಬಿಟ್ಟಿದ್ದಾರೋ?

ಶ್ರೀ ಎ.ಟಿ. ರಾಮಸ್ವಾಮಿ : ಸ್ವಂತಕ್ಕೆ ಅವರ ಮನೆ ಕಟ್ಟುವುದಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಅಧ್ಯಕ್ಷರು : ಅದು ಕಟ್ಟಡದ ಸಾಮಾನು, ಕಟ್ಟಡಕ್ಕೆ ತಾನೇ ಉಪಯೋಗಿಸಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಅದು ದುರುಪಯೋಗವಲ್ಲ. ಅದು ಸದುಪಯೋಗವೇ. ತಮ್ಮ್ಮವ್ಯಂಗ್ಯ ಅರ್ಥವಾಯಿತು. ಮಾನ್ಯ ರಾಮಸ್ವಾಮಿಯವರು ನನ್ನ ಗಮನಕ್ಕೆ ಅದನ್ನು ತಂದಿದ್ದಾರೆ. ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಕೇಸ್ ಕೂಡ ಹಾಕಬೇಕು ಮತ್ತು ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಆದೇಶ ಕಳುಹಿಸಿಕೊಟ್ಟಿದ್ದೇನೆ. ಅದರ ವರದಿ ಬರುತ್ತದೆ. ಬಂದಮೇಲೆ ಅಮಾನತ್ತಿನಲ್ಲಿ ಇರುವ ಬಗ್ಗೆ ಕೂಡ ನಾನು ಯೋಚನೆ ಮಾಡುತ್ತೇನೆ.

ಆಲಮಟ್ಟಿಯೋಜನೆಯ ಪುನರ್ವಸತಿ ಅಧಿಕಾರಿಗಳು ಶಾಸಕರ ಮೇಲೆ ಮಾಡಿರುವ ಆರೋಪ

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ) : ಮಾನ್ಯ ಅಧ್ಯಕ್ಷರೇ, ದಿನಾಂಕ 20.2.97ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸಿ. ಜಾಮೆದಾರ್. ಆಯುಕ್ತರು, ಆಲಮಟ್ಟಿ ಯೋಜನೆ ಎಳೆದು